# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ : M/s Project Ten Renewable Power Private Limited ಕಂಪನಿಯವರಿಗೆ ಕೊಪ್ಪಳ ಜಿಲ್ಲೆ, ಕುಷ್ಟಗಿ ಮತ್ತು ಯಲಬುರ್ಗಾ ತಾಲ್ಲೂಕುಗಳ ವಿವಿಧ ಗ್ರಾಮಗಳಲ್ಲಿ 150 ಮೆ.ವ್ಯಾ. ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು ಹಂಚಿಕೆ ಮಾಡುವ ಬಗ್ಗೆ.

ಓದಲಾಗಿದೆ: 1) ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ ರವರ ಪತ್ರ ಸಂಖ್ಯೆ:KREDL/08/PTRPPL-150 MW/ Koppal/F-23/2022/544, ದಿನಾಂಕ:08.03.2022.

2) ದಿನಾಂಕ:09.03.2022ರಂದು ನಡೆದ ಹಂಚಿಕೆ ಸಮಿತಿ ಸಭೆಯ ನಡವಳಿ.

**ಪ್ರಸ್ತಾವನೆ :-**

ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ಪತ್ರದನ್ವಯ ವ್ಯವಸ್ಥಾಪಕ ನಿರ್ದೇಶಕರು, ಕೆ.ಆರ್.ಇ.ಡಿ.ಎಲ್. ರವರು ಸರ್ಕಾರಕ್ಕೆ ಸಲ್ಲಿಸಿರುವ ಪ್ರಸ್ತಾವನೆಯಲ್ಲಿ M/s Project Ten Renewable Power Private Limited ರವರಿಗೆ ಕೊಪ್ಪಳ ಜಿಲ್ಲೆಯ, ಕುಷ್ಟಗಿ ಮತ್ತು ಯಲಬುರ್ಗಾ ತಾಲ್ಲೂಕುಗಳ ನರಸಕೊಪ್ಪ, ಬೆಂಚಮಟ್ಟಿ ಗೋರಗೆ, ಬಂಡ್ಲ, ಮಾತ್ರಂಗಿ, ಜುಲ್‌ಕಟ್ಟಿ, ಬುಲುಟಗಿ, ಹಗ್ಗದಾಲ್, ಬಸ್ಸಾಪುರ, ತೂಮರ್‌ಗುಡಿ, ಚಿಕ್ಕಕೊಪ್ಪ ಮತ್ತು ಹೊಸಹಳ್ಳಿ ಗ್ರಾಮಗಳಲ್ಲಿ 150 ಮೆ.ವ್ಯಾ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು ಹಂಚಿಕೆ ಪಡೆಯುವ ಕುರಿತು ವಿಸ್ತೃತ ಯೋಜನಾ ವರದಿಯನ್ನು ತಯಾರಿಸಿ, ಕ್ರೆಡಲ್‌ಗೆ ಸಲ್ಲಿಸಿರುವುದಾಗಿ ಹಾಗೂ ಸದರಿ ಯೋಜನೆಯಿಂದ ಉತ್ಪಾದನೆಯಾಗುವ ವಿದ್ಯುತ್ತನ್ನು ಕೇಂದ್ರ ಸರ್ಕಾರದ Power Grid Corporation of India Limited (PGCIL) ನ ವಿದ್ಯುತ್ ಪ್ರಸರಣ ಜಾಲಕ್ಕೆ ಜೋಡಿಸಿ, ಹೊರ ರಾಜ್ಯಗಳಿಗೆ SECI ಬಿಡ್ಡಿಂಗ್ / ಮೂರನೇ ವ್ಯಕ್ತಿಗೆ Inter State Transmission System (ISTS) ಮುಖಾಂತರ ವಿದ್ಯುತ್ ಸರಬರಾಜು ಮಾಡುವ ವರ್ಗದಡಿ ಪ್ರತಿ ವಿಂಡ್ ಟರ್ಬೈನ್ ಗೆ 4 ಎಕರೆಯಂತೆ Footprint basis ಲೆಕ್ಕೀಕರಿಸಿ, ಜಮೀನುಗಳನ್ನು ಉಪಯೋಗಿಸುವುದು ಮತ್ತು ಪವನ ವಿದ್ಯುತ್ ಘಟಕಗಳ ಅಂತರವನ್ನು MNRE ಸುತ್ತೋಲೆ/ಮಾರ್ಗಸೂಚಿಯಂತೆ, ಅಳವಡಿಸುವ ಷರತ್ತುಗಳನ್ನು ವಿಧಿಸಿ, ಹಂಚಿಕೆ ನೀಡುವಂತೆ ಕೋರಿರುವುದಾಗಿ ತಿಳಿಸಿರುತ್ತಾರೆ.

ಮುಂದುವರೆದು, M/s Project Ten Renewable Power Private Limited ವಿಂಡ್ ಟರ್ಬೈನ್‌ಗಳನ್ನು ಅಳವಡಿಸಲು ಉದ್ದೇಶಿಸಿರುವ ಸ್ಥಳದ ಪ್ರಸ್ತಾವನೆಯನ್ನು ಪರಿಶೀಲಿಸಲಾಗಿ, ಸದರಿಯವರು 50 ವಿಂಡ್ ಟರ್ಬೈನ್‌ಗಳಲ್ಲಿ 42 ವಿಂಡ್ ಟರ್ಬೈನ್‌ಗಳನ್ನು ಅಳವಡಿಸಲು ಉದ್ದೇಶಿರುವ ಸ್ಥಳವು M/s Clean Wind Power (Tuticorin) Private Limited ರವರಿಗೆ ಹಂಚಿಕೆಯಾಗಿರುವ 150 ಮೆ.ವ್ಯಾ. ಸಾಮರ್ಥ್ಯದ ಯೋಜನೆಯ ಸ್ಥಳದಲ್ಲಿ ಬರುತ್ತಿದ್ದು, ಸದರಿ ಸ್ಥಳವು ಅಂದಾಜು 46,000 ಎಕರೆ ವಿಸ್ತೀರ್ಣ ಹೊಂದಿರುತ್ತದೆ. ಸದರಿಯವರು ಯೋಜನೆಯನ್ನು ಇನ್ನೂ ಅನುಷ್ಠಾನಗೊಳಿಸಿರುವುದಿಲ್ಲ ಮತ್ತು ಯೋಜನೆಯ ಅನುಷ್ಠಾನದ ಕಾಲಾವಧಿಯು ಮುಕ್ತಾಯವಾಗಿರುತ್ತದೆ. ಪ್ರಸ್ತುತ ಸರ್ಕಾರವು ಪ್ರತಿ ವಿಂಡ್ ಟರ್ಬೈನ್‌ಗೆ 04 ಎಕರೆಯಂತೆ ನೀಡಲಾಗುತ್ತಿದ್ದು, ಇದರಂತೆ M/s Clean Wind Power (Tuticorin) Private Limited ಪ್ರತಿ ವಿಂಡ್ ಟರ್ಬೈನ್ ಗೆ 04 ಎಕರೆಯಂತೆ ಲೆಕ್ಕೀಕರಿಸಿ 300 ಎಕರೆ (75 Nos of WTG X 4 Acres = 300 Acres) ಜಮೀನನ್ನು ಉಪಯೋಗಿಸಿಕೊಳ್ಳಬಹುದಾಗಿದೆ ಹಾಗೂ M/s Project Ten Renewable Power Private Limited ರವರ 42 ವಿಂಡ್ ಟರ್ಬೈನ್‌ಗಳಿಗೆ ಪ್ರತಿ ವಿಂಡ್ ಟರ್ಬೈನ್‌ಗೆ 04 ಎಕರೆಯಂತೆ ಲೆಕ್ಕೀಕರಿಸಿ 168 ಎಕರೆ (42 Nos of WTG X 4 Acres = 168 Acres) ಜಮೀನನ್ನು ಉಪಯೋಗಿಸಿಕೊಳ್ಳಬಹುದಾಗಿದೆ.

ಇನ್ನುಳಿದ 8 ವಿಂಡ್ ಟರ್ಬೈನ್‌ಗಳನ್ನು M/s Ostro Dakshin Power Private Limited ಕಂಪನಿಯವರು 100 ಮೆ.ವ್ಯಾ. ಸಾಮರ್ಥ್ಯವನ್ನು ಅನುಷ್ಠಾನಗೊಳಿಸಿರುವ ಪ್ರದೇಶದಲ್ಲಿ ಬರುತ್ತಿದೆ. ಸದರಿ ಸ್ಥಳವು ಅಂದಾಜು 46800 ಎಕರೆ ವಿಸ್ತೀರ್ಣ ಹೊಂದಿದ್ದು, M/s Ostro Dakshin Power Private Limited ಕಂಪನಿಯವರು 100 ಮೆ.ವ್ಯಾ. ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯ ಅನುಷ್ಠಾನಕ್ಕೆ ಉಪಯೋಗಿಸಿರುವ ಸ್ಥಳವನ್ನು ಬಿಟ್ಟು ಉಳಿದ ಜಾಗದಲ್ಲಿ M/s Project Ten Renewable Power Private Limited ರವರ 8 ವಿಂಡ್ ಟರ್ಬೈನ್‌ಗಳಿಗೆ ಪ್ರತಿ ವಿಂಡ್ ಟರ್ಬೈನ್‌ಗೆ 04 ಎಕರೆಯಂತೆ ಲೆಕ್ಕೀಕರಿಸಿ 32 ಎಕರೆ (8 Nos of WTG X 4 Acres = 32 Acres) ಜಮೀನನ್ನು ಉಪಯೋಗಿಸಿಕೊಳ್ಳಬಹುದಾಗಿದೆ ಎಂದು ಅಭಿಪ್ರಾಯಪಟ್ಟಿರುತ್ತಾರೆ.

Wind Section
Inward No. 328
Date 1/4/22

....2

M/s Project Ten Renewable Power Private Limited ಕಂಪನಿಯು ದಿನಾಂಕ: 19.03.2021ರಂದು ನೋಂದಾವಣೆಗೊಂಡಿದ್ದು, ಇದರ ನೋಂದಾಯಿತ ಕಚೇರಿಯು ಬೆಂಗಳೂರಿನಲ್ಲಿ ಸ್ಥಾಪಿತಗೊಂಡಿರು ತ್ತದೆ. ಸದರಿ ಕಂಪನಿಯು M/s Ayana Renewable Power Private Limited ಕಂಪನಿಯ SPV ಆಗಿದ್ದು, ಸದರಿ ಕಂಪನಿಯ ನೆಟ್‌ವರ್ತ್ ದಿನಾಂಕ:31.03.2021ರ ಅಂತ್ಯಕ್ಕೆ ರೂ.1486.94 ಕೋಟಿಗಳಾಗಿರುತ್ತದೆ ಎಂದು ಚಾರ್ಟೆಡ್ ಅಕೌಂಟೆಂಟ್ ರವರು ದೃಢೀಕರಣ ಪತ್ರವನ್ನು ನೀಡಿರುವುದಾಗಿ ತಿಳಿಸಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ (2) ರ ಹಂಚಿಕೆ ಸಮಿತಿ ಸಭೆಯಲ್ಲಿ M/s Project Ten Renewable Power Private Limited ರವರು ಕೊಪ್ಪಳ ಜಿಲ್ಲೆಯ, ಕುಷ್ಟಗಿ ಮತ್ತು ಯಲಬುರ್ಗಾ ತಾಲ್ಲೂಕುಗಳ ವಿವಿಧ ಗ್ರಾಮಗಳಲ್ಲಿ ISTS ವರ್ಗದಡಿಯಲ್ಲಿ ಹಂಚಿಕೆ ನೀಡುವಂತೆ ಕೋರಿರುವ 150 ಮೆ.ವ್ಯಾ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯ ಸ್ಥಳವು ಖಾಸಗಿ ಜಮೀನಾಗಿರುತ್ತದೆ. ಸದರಿಯವರು 3 ಮೆ.ವ್ಯಾ ಸಾಮರ್ಥ್ಯದ 50 ವಿಂಡ್ ಟರ್ಬೈನ್‌ಗಳನ್ನು ಅಳವಡಿಸುತ್ತಿದ್ದು, ಅಳವಡಿಸುವ Wind Turbine ಗಳಿಗೆ ಅಕ್ಷಾಂಶ ಮತ್ತು ರೇಖಾಂಶಗಳನ್ನು ನೀಡಿರುತ್ತಾರೆ. ಆದುದರಿಂದ ಸದರಿ ಅಭಿವೃದ್ಧಿದಾರರು ಅಳವಡಿಸುವ ಪ್ರತಿ ಟರ್ಬೈನ್ ನ footprint ಜಾಗಕ್ಕೆ 4 ಎಕರೆಗಳಂತೆ ಒಟ್ಟು 200 ಎಕರೆ (50 x 4 =200) ಜಮೀನನ್ನು ಮಾತ್ರ ಪವನ ವಿದ್ಯುತ್ ಯೋಜನೆಯನ್ನು ಅನುಷ್ಠಾನಗೊಳಿಸಲು Toposheet 57 A/2 ರಲ್ಲಿ ಉಪಯೋಗಿಸಿ ಕೊಳ್ಳಬಹುದಾಗಿದೆ ಹಾಗೂ ಸದರಿಯವರು ಅಳವಡಿಸುವ ಪವನ ವಿದ್ಯುತ್ ಘಟಕಗಳ ಅಂತರವನ್ನು MNRE ಸುತ್ತೋಲೆ/ಮಾರ್ಗಸೂಚಿಯಂತೆ (Micrositing Guidelines) ಅಳವಡಿಸ ಬೇಕಾಗಿರುತ್ತದೆ. ಆದ ಕಾರಣ ಯೋಜನೆಗೆ ಬೇಕಾಗುವ ಜಮೀನನ್ನು ಪಡೆಯುವುದು ಮತ್ತು PGCIL ನಿಂದ Evacuation ಅನುಮತಿ ಪತ್ರ ಹಾಗೂ LTA approval ಪಡೆಯುವುದು ಅಭಿವೃದ್ಧಿದಾರರ ಜವಾಬ್ದಾರಿಯಾಗಿರುತ್ತದೆ ಎಂದು ತಿಳಿಸುತ್ತಾ, ಈ ಕೆಳಕಂಡ ಷರತ್ತುಗಳಿಗೊಳಪಟ್ಟು M/s Project Ten Renewable Power Private Limited ರವರಿಗೆ ಕೊಪ್ಪಳ ಜಿಲ್ಲೆ, ಕುಷ್ಟಗಿ ಮತ್ತು ಯಲಬುರ್ಗಾ ತಾಲ್ಲೂಕುಗಳ ವಿವಿಧ ಗ್ರಾಮಗಳಲ್ಲಿ ISTS ವರ್ಗದಡಿಯಲ್ಲಿ 150 ಮೆ.ವ್ಯಾ ಸಾಮರ್ಥ್ಯದ ಪವನ ಯೋಜನೆಯನ್ನು ಈ ಕೆಳಕಂಡ ಷರತ್ತಿಗೊಳಪಟ್ಟು ಹಂಚಿಕೆ ನೀಡಲು ಸಮಿತಿಯು ಸರ್ವಾನುಮತದಿಂದ ಶಿಫಾರಸ್ಸು ಮಾಡಿರುತ್ತದೆ.

1) ಸದರಿ ಯೋಜನೆಯಿಂದ ಉತ್ಪಾದನೆಯಾಗುವ ವಿದ್ಯುತ್ ನ್ನು ಕೇಂದ್ರ ಸರ್ಕಾರದ Power Grid Corporation of India Limited (PGCIL) ನ ವಿದ್ಯುತ್ ಪ್ರಸರಣ ಜಾಲಕ್ಕೆ ಜೋಡಿಸಿ, ಹೊರ ರಾಜ್ಯಗಳಿಗೆ SECI ಬಿಡ್ಡಿಂಗ್ / ಮೂರನೇ ವ್ಯಕ್ತಿಗೆ Inter State Transmission System (ISTS) ಮುಖಾಂತರ ವಿದ್ಯುತ್ ಸರಬರಾಜು ಮಾಡಲು
2) ಈಗಾಗಲೇ ಇತರೆ ಅಭಿವೃಧ್ಧಿದಾರರುಗಳು ಹಂಚಿಕೆ/ತಾತ್ವಿಕ ಅನುಮೋದನೆಯನ್ನು ಪಡೆದಿರುವ ಪ್ರದೇಶದಲ್ಲಿ ಪ್ರಸ್ತಾಪಿತ ಯೋಜನೆಯು Overlap ಆಗಿದ್ದಲ್ಲಿ, ಸದರಿಯವರು ಕೋರಿರುವ ಪ್ರಸ್ತಾವನೆಯ ಹಂಚಿಕೆ/ತಾತ್ವಿಕ ಅನುಮೋದನೆಯು ರದ್ದುಗೊಳ್ಳುತ್ತದೆ.

**Tentative Latitude and Longitude of WTG Locations for 150 MW capacity Wind Power Project of M/s Project Ten Renewable Power Private Limited**

| WTG ID | Longitude | Latitude |
|---|---|---|
| KKN 001 | 76°00'55.40" | 15°44'43.37" |
| KKN 002 | 76°02'28.82" | 15°39'31.24" |
| KKN 003 | 76°01'51.17" | 15°43'53.51" |
| KKN 004 | 76°02'36.13" | 15°44'44.05" |
| KKN 005 | 76°01'58.07" | 15°42'31.27" |
| KKN 006 | 76°01'55.00" | 15°44'24.86" |

...3